**O.S. No. 89/2015**
**ಪಿ.ಡಬ್ಲ್ಯು-01**

**ಸಾಕ್ಷಿಯನ್ನು ದಿನಾಂಕಃ 13.07.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಮಾನ್ಯ ಸರ್ಕಾರಿ ವಕೀಲರಿಂದಃ**

ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆದ ದಿನದಿಂದ ಹೊಗೆ ಸೊಪ್ಪು, ಹತ್ತಿ ಮತ್ತು ರಾಗಿಯನ್ನು ಬೆಳೆಯುತ್ತಿದ್ದೇನೆ. 2022-2023 ನೇ ಸಾಲಿನಲ್ಲಿ ದಾವಾ ಸ್ವತ್ತಿನಲ್ಲಿ ಹತ್ತಿ ಬೆಳೆ ಬೆಳೆದಿರುತ್ತೇನೆ. 2003 ರಿಂದಲೂ ಪಹಣಿ ಪತ್ರಿಕೆಯಲ್ಲಿ ಬೆಳೆ ವಿವರ ನಮೂದಾಗಿರುತ್ತದೆ. ಪ್ರಸ್ತುತ ಬೆಳೆದಿರುವ ಬೆಳೆಯ ಬಗ್ಗೆ ಭಾವಚಿತ್ರವನ್ನು ನಾನು ಹಾಜರುಪಡಿಸುತ್ತೇನೆ. ನಿ.ಪಿ.-12 ಮತ್ತು ನಿ.ಪಿ.-13 ರಲ್ಲಿ ನಮೂದಿಸಿರುವ ಜಮೀನಿನ ಚೆಕ್ ಬಂದಿ ನನಗೆ ಗೊತ್ತು. ಸ.ನಂ. 6/5 ಪಿ ರ ಜಮೀನಿನ ಪೂರ್ವಕ್ಕೆ - ಮರಿಶೆಟ್ಟಿ, ಪಶ್ಚಿಮಕ್ಕೆ - ನಮ್ಮದೇ ಜಮೀನು, ಉತ್ತರಕ್ಕೆ - ಪುಟ್ಟಯ್ಯರವರ ಜಮೀನು ಮತ್ತು ದಕ್ಷಿಣಕ್ಕೆ - ಹೆಬ್ಬಳ್ಳ ಇರುತ್ತದೆ. ಸ.ನಂ. 6/9 ಪಿ ರ ಜಮೀನಿನ ಪೂರ್ವಕ್ಕೆ - ನಮ್ಮದೇ ಜಮೀನು, ಪಶ್ಚಿಮಕ್ಕೆ - ಅರಣ್ಯ ಇಲಾಖೆಗೆ ಸೇರಿದ ಸ್ವತ್ತು, ಉತ್ತರಕ್ಕೆ - ನಮ್ಮದೇ ಜಮೀನು ಮತ್ತು ದಕ್ಷಿಣಕ್ಕೆ - ಅರಣ್ಯ ಇಲಾಖೆಗೆ ಸೇರಿದ ಸ್ವತ್ತು ಇರುತ್ತದೆ. ಈಗ ನನಗೆ ತೋರಿಸುತ್ತಿರುವ ಭಾವಚಿತ್ರದಲ್ಲಿ ತೆಗೆದಿರುವ ಟ್ರೆಂಚ್ ಆನೆ ಕಂದಕವಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ಭಾವಚಿತ್ರವನ್ನು ನೋಡಿ ಒಪ್ಪಿಕೊಂಡಿದ್ದರಿಂದ, ಅದನ್ನು ನಿ.ಡಿ.-1 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸುತ್ತಿರುವ ಭಾವಚಿತ್ರದಲ್ಲಿ ಕಾಣುವ ಸ್ವತ್ತು ನಿ.ಡಿ.-1 ರಲ್ಲಿ ಕಾಣುವ ಆನೆ ಕಂದಕ ತೋಡಿರುವ ಪೂರ್ವಕ್ಕೆ ಇರುವ ಜಮೀನಾಗಿರುತ್ತದೆ. ಸಾಕ್ಷಿಯು ಸದರಿ ಭಾವಚಿತ್ರವನ್ನು ನೋಡಿ ಒಪ್ಪಿಕೊಂಡಿದ್ದರಿಂದ, ಅದನ್ನು ನಿ.ಡಿ.-2 ಎಂದು ಗುರುತಿಸಲಾಯಿತು. ನಿ.ಡಿ.-2 ರಲ್ಲಿ ಹತ್ತಿ, ಹೊಗೆಸೊಪ್ಪು ಮತ್ತು ರಾಗಿ ಬೆಳೆ ಬೆಳೆದಿರುವುದು ಕಾಣುತ್ತಿಲ್ಲ ಎಂದರೆ ಸರಿ. ನಿ.ಡಿ.-1 ರಲ್ಲಿ ಕಾಣುವ ಆನೆ ಕಂದಕ ತಗೆದಿರುವ ಮಣ್ಣಿನ ಗುಡ್ಡೆ ಇರುವ ಸ್ಥಳದಿಂದ ಬಲಗಡೆ ಇರುವ ಸ್ಥಳ ಅರಣ್ಯ ಪ್ರದೇಶವಾಗಿರುತ್ತದೆ. ನಿ.ಡಿ.-1 ರಲ್ಲಿ ಕಾಣುವ ಆನೆ ಕಂದಕ ತೆಗೆದಿರುವ ಸ್ಥಳದಿಂದ ರೈಲ್ವೆ ಕಂಬಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ಹಾಕಲು ಯಾವುದಾದರು ತೊಂದರೆ ಇದೆಯಾ ಎಂದರೆ ನಮ್ಮದೇನು ಅಭ್ಯಂತರವಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**